

# ಏನಿದು ಕ್ಯಾಂಡಿಡಿಯೋಸಿಸ್?

**ನಾಲಿಗೆಯ ಮೇಲ್ಭಾಗದಲ್ಲಿ ಬಿಳಿ ಪದರದ ರೀತಿ ಕಂಡುಬರುವ ಶಿಲೀಂಧ್ರ ಸೋಂಕು ಅನೇಕ ಸಮಸ್ಯೆಗಳಿಗೆ ಕಾರಣವಾಗಬಹುದು. ಕ್ಯಾಂಡಿಡಿಯೋಸಿಸ್ ಎಂದು ಕರೆಯುವ ಈ ಕಾಯಿಲೆ ದೇಹದಲ್ಲಿ ಪ್ರತಿರೋಧಕ ಶಕ್ತಿ ಕಡಿಮೆಯಾದಾಗ ಬರುವ ತೊಂದರೆ.**

**■ ಡಾ. ಮುರಲೀ ಮೋಹನ ಚೂಂತಾರು**

ನಲವತ್ತು ವರ್ಷದ ಕುಸುಮಾ ಹುಳುಕು ಹಲ್ಲಿನ ಚಿಕಿತ್ಸೆಗಾಗಿ ನನ್ನ ಕ್ಲಿನಿಕ್‌ಗೆ ಬಂದಿದ್ದರು. ಡೆಂಟಲ್ ಚೇರ್‌ನಲ್ಲಿ ಕೂರಿಸಿ ಬಾಯಿ ತೆರೆಯಲು ಹೇಳಿದೆ. ಈಕೆ ಬಾಯಿ ತೆರೆಯುತ್ತಿದ್ದಂತೆ ವಿಪರೀತ ವಾಸನೆ ಬಂತು. ಹಲ್ಲುಗಳಿಗೆ ಏನಾಗಿದೆ ಎಂದು ನೋಡುವ ಮೊದಲೇ ಈಕೆಯ ನಾಲಿಗೆಯ ಮೇಲ್ಭಾಗದಲ್ಲಿ ಬಿಳಿಯ ಪದರ ಕಾಣಿಸಿತು. ಇದು ಶಿಲೀಂಧ್ರ ಸೋಂಕು ಎಂಬುದು ಮೇಲ್ನೋಟಕ್ಕೇ ದೃಢವಾಯಿತು. ಹುಳುಕು ಹಲ್ಲಿಗೆ ಚಿಕಿತ್ಸೆ ನೀಡಿ ಬಾಯಿಯಲ್ಲಿನ ಶಿಲೀಂಧ್ರ ಸೋಂಕಿನ ಬಗ್ಗೆ ಮಾಹಿತಿ ನೀಡಿ ಶೀಘ್ರವೇ ಚಿಕಿತ್ಸೆ ಪಡೆಯಲು ಸಲಹೆ ನೀಡಿ ಕಳಿಸಿದೆ.

ಇದು ಕ್ಯಾಂಡಿಡಿಯೋಸಿಸ್, ಎಂದರೆ ಶಿಲೀಂಧ್ರಗಳ ಸೋಂಕಿನಿಂದ ಉಂಟಾಗುವ ಕಾಯಿಲೆ. ಹೆಚ್ಚಾಗಿ ಬಾಯಿಯೊಳಗೆ ನಾಲಗೆ ಮೇಲ್ಭಾಗದಲ್ಲಿ ದಪ್ಪಗಿನ ಬಿಳಿ ಪದರ ರೀತಿಯಲ್ಲಿ ಈ ಸೋಂಕು ಕಂಡುಬರುತ್ತದೆ. ಕ್ಯಾಂಡಿಡಾ ಆಲ್ಬಿಕನ್ಸ್ ಎಂಬ ಶಿಲೀಂಧ್ರಗಳಿಂದ ಈ ಸೋಂಕು ಉಂಟಾಗುತ್ತದೆ. ಇದೊಂದು ಪರಾವಲಂಬಿ ಜೀವಿಯಾಗಿದ್ದು ನಮ್ಮ ಬಾಯಿಯೊಳಗೆ ನಿರುಪದ್ರವಿ ಜೀವಿಯಂತೆ ಬದುಕುತ್ತದೆ. ದೇಹದ ಪ್ರತಿರೋಧಕ ಶಕ್ತಿ ಕುಂಠಿತವಾದಾಗ, ಈ ನಿರುಪದ್ರವಿ ಪರಾವಲಂಬಿ ಜೀವಿಗಳು ತಮ್ಮ ನಿಜರೂಪ ದರ್ಶನವನ್ನು ತೋರಿಸಿ ಬಾಯಿಯಲ್ಲಿ ಕಂಡುಬರುತ್ತವೆ. ಅಷ್ಟೇ ಅಲ್ಲದೆ ಹೆಚ್ಚು ಒದ್ದೆ ಇರುವ ಭಾಗಗಳಾದ ಚರ್ಮದ ಸಂದುಗಳಲ್ಲಿ ಮತ್ತು ಮಹಿಳೆಯರ ಜನನಾಂಗದ ಬಳಿಯೂ ಈ ಸೋಂಕು ಕಂಡುಬರುವ ಸಾಧ್ಯತೆ ಇದೆ.

ಬೆರಳುಗಳ ಮತ್ತು ಉಗುರುಗಳ ಸಂಧಿಯಲ್ಲಿಯೂ ಈ ಸೋಂಕು ಕಂಡುಬರುವ ಸಾಧ್ಯತೆ ಇದೆ. ಬಾಯಿಯೊಳಗೆ ಕಂಡುಬರುವ ಶಿಲೀಂಧ್ರಗಳ ಸೋಂಕನ್ನು 'ಓರಲ್ ಥ್ರಷ್' ಎಂದೂ ಕರೆಯಲಾಗುತ್ತದೆ.

### ಯಾರಿಗೆಲ್ಲಾ ಈ ಸೋಂಕು ತಗುಲಬಹುದು?

- ಅತಿಯಾದ ಆ್ಯಂಟಿಬಯೊಟಿಕ್ ಬಳಸುವಾಗ, ಈ ಶಿಲೀಂಧ್ರಗಳ ಮೇಲಿನ ಬ್ಯಾಕ್ಟೀರಿಯಾ ನಿಯಂತ್ರಣ ತಪ್ಪಿ ಹೋಗಿ ಶಿಲೀಂಧ್ರಗಳು ಹೆಚ್ಚು ವಿಜೃಂಭಿಸಲು ಆರಂಭಿಸುತ್ತದೆ.
- ಅನಿಯಂತ್ರಿತ ಮಧುಮೇಹಿ ರೋಗಿಗಳಲ್ಲಿ ದೇಹದ ರಕ್ಷಣಾ ಶಕ್ತಿ ಕುಂದಿದಾಗ ಸೋಂಕು ಹೆಚ್ಚು ಕಂಡುಬರುತ್ತದೆ.
- ಏಡ್ಸ್ ಮತ್ತು ಹೆಚ್‌ಐವಿ ಸೋಂಕಿತರಲ್ಲಿ ದೇಹದ ರಕ್ಷಣಾ ವ್ಯವಸ್ಥೆ ಶಿಥಿಲವಾದಾಗ ಈ ಕ್ಯಾಂಡಿಡಿಯೋಸಿಸ್ ಸೋಂಕು ಕಾಣಬಹುದು.
- ಸಂತಾನ ನಿಯಂತ್ರಣ ಔಷಧಿ ಸೇವಿಸುವವರಲ್ಲಿ ಮತ್ತು ಗರ್ಭಿಣಿಯರಿಗೆ ಈ ಸೋಂಕು ಬೇಗನೆ ತಗಲುವ ಸಾಧ್ಯತೆ ಇದೆ.
- ಕ್ಯಾನ್ಸರ್ ರೋಗಿಗಳಲ್ಲಿ ಕಿಮೋಥೆರಪಿ ತೆಗೆದುಕೊಳ್ಳುವಾಗ ರೋಗ ನಿರೋಧಕ ಶಕ್ತಿ ಕುಂದಿ ಈ ಸೋಂಕು ಬರಬಹುದು.
- ವಿವಿಧ ಕಾರಣಗಳಿಗಾಗಿ ದೀರ್ಘಾವಧಿ ಸ್ಟೀರಾಯ್ಡ್ ಸೇವನೆ ಮಾಡುವ ರೋಗಿಗಳಲ್ಲಿ ಈ ಕ್ಯಾಂಡಿಡಿಯೋಸಿಸ್ ಶಿಲೀಂಧ್ರ ಸೋಂಕು ಬೇಗನೆ ಬರುವ ಸಾಧ್ಯತೆ ಹೆಚ್ಚು.
- ಅತಿಯಾಗಿ ಮಾನಸಿಕ ಒತ್ತಡ ಮತ್ತು ಮಾದಕ ವ್ಯಸನಿಗಳಲ್ಲಿಯೂ ಸೋಂಕು ಸರ್ವೇಸಾಮಾನ್ಯ.